

# ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ಡಿಪ್ಲೋಮಾ ಮತ್ತು ಸರ್ಟಿಫಿಕೇಟ ಕೋರ್ಸುಗಳಿಗೆ ವಿವರಣಾ ಹಾಗೂ ಮಾಹಿತಿ ಪತ್ರಿಕೆ

೨೦೧೦



**ಎಸ್.ಎಸ್.ಎಲ್.ಸಿ. ಪಾಸಾದ ವಿದ್ಯಾರ್ಥಿಗಳಿಗಾಗಿ**



# ಸಂದೇಶ

ಧಾರವಾಡ ಕೃಷಿ ವಿಶ್ವವಿದ್ಯಾಲಯವು ದಶಕಗಳಿಂದ ಕೃಷಿ ಹಾಗೂ ಕೃಷಿ ಅವಲಂಬಿತ ಕ್ಷೇತ್ರಗಳಲ್ಲಿ ಸಂಶೋಧನೆ, ಶಿಕ್ಷಣ ಹಾಗೂ ವಿಸ್ತರಣಾ ಚಟುವಟಿಕೆಗಳನ್ನು ಕೈಗೊಳ್ಳುತ್ತ ಬಂದಿದ್ದು ರೈತ ಸಮುದಾಯದ ಅಭಿವೃದ್ಧಿಯಲ್ಲಿ ತನ್ನದೇ ಆದ ಮಹತ್ತರ ಪಾತ್ರ ವಹಿಸುತ್ತಿದೆ. ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಸಾಧಿಸಿದ್ದರೂ ತೀವ್ರ ಗತಿಯಲ್ಲಿನ ಜನಸಂಖ್ಯಾ ಸ್ಫೋಟ ಮತ್ತು ನಾಗಾಲೋಟದಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆಯಿಂದಾಗಿ ಕೃಷಿ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿ ಎದ್ದು ಕಾಣುತ್ತಿಲ್ಲ. ವರ್ಷದಿಂದ ವರ್ಷ ಸಾಗುವಳಿ ಕೃಷಿ ಕ್ಷೇತ್ರವು ಕ್ಷೀಣಿಸುತ್ತಿದ್ದು, ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಪೂರೈಸುವುದೇ ಒಂದು ಸವಾಲಾಗಿದೆ.

ಈ ದಿಶೆಯಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯವು ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಹಾಗೂ ಇತರೆ ಕೃಷಿ ಪೂರಕ ಕ್ಷೇತ್ರಗಳಲ್ಲಿ ನಿರಂತರ ಸಂಶೋಧನೆಯಿಂದ ಕೃಷಿ ಉತ್ಪಾದನೆ ಹೆಚ್ಚಿಸಲು ಸಾಕಷ್ಟು ನವೀನ ತಾಂತ್ರಿಕತೆಗಳನ್ನು ಅಭಿವೃದ್ಧಿಪಡಿಸಿದೆ ಹಾಗೂ ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಇದರೊಂದಿಗೆ ಈ ವಿಶ್ವವಿದ್ಯಾಲಯವು ಕೃಷಿಗೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಶಿಕ್ಷಣವನ್ನು ಒದಗಿಸುತ್ತಿದ್ದು, ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಈಗಿನ ಸ್ಪರ್ಧಾತ್ಮಕ ದಿನಗಳಲ್ಲಿ ಎಲ್ಲರಿಗೂ ಉನ್ನತ ಶಿಕ್ಷಣದ ಸೌಲಭ್ಯ ದೊರೆಯುವುದು ಕಷ್ಟವಾಗಿದೆ. ಅದರಲ್ಲೂ ಗ್ರಾಮೀಣ ಯುವಕ–ಯುವತಿಯರು, ಕೃಷಿಕರ ಹಾಗೂ ಕೃಷಿಕಾರ್ಮಿಕರ ಮಕ್ಕಳು ಆರ್ಥಿಕ ತೊಂದರೆಗಳಿಂದ ಸೌಲಭ್ಯವಂಚಿತರಾಗಿ ಉನ್ನತ ಶಿಕ್ಷಣ ಪಡೆಯುವುದು ಸಮಸ್ಯೆಯಾಗಿದೆ. ಈ ಹಿನ್ನೆಲೆಯಲ್ಲಿ, ಇಂತಹ ಯುವ ಸಮುದಾಯ ಕೃಷಿಯಲ್ಲಿ, ಕೃಷಿ ಆಧಾರಿತ ಕಿರು ಉದ್ದಿಮೆಗಳಲ್ಲಿ ತಮ್ಮನ್ನು ಆತ್ಮವಿಶ್ವಾಸದಿಂದ ತೊಡಗಿಸಿಕೊಂಡು ಸ್ವಾವಲಂಬಿ ಬದುಕನ್ನು ರೂಪಿಸಿಕೊಳ್ಳಲು ಧಾರವಾಡ ಕೃಷಿ ವಿಶ್ವವಿದ್ಯಾಲಯವು ಆರು ವಿವಿಧ ವಿಷಯಗಳಲ್ಲಿ ಒಂದು ವರ್ಷ ಅವಧಿಯ ಡಿಪ್ಲೋಮಾ ಕೋರ್ಸುಗಳನ್ನು ಹಾಗೂ ಮೂರು ತಿಂಗಳ ಅವಧಿಯ ಎರಡು ಸರ್ಟಿಫಿಕೇಟ ಕೋರ್ಸುಗಳನ್ನು ಪ್ರಾರಂಭಿಸಿದೆ. ಈ ಕೋರ್ಸುಗಳಲ್ಲಿ ಪ್ರಾಯೋಗಿಕ ಅನುಭವಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುತ್ತಿದ್ದು, ಕೃಷಿಯಲ್ಲಿ ತೊಡಗಿದ ಯುವಕ–ಯುವತಿಯರಿಗೆ ಸ್ವಾವಲಂಬಿ ಬದುಕಿನತ್ತ ಹೆಚ್ಚಿನ ಆತ್ಮವಿಶ್ವಾಸದಿಂದ ಮುನ್ನಡೆಯಲು ಸೂಕ್ತ ಬುನಾದಿ ಒದಗಿಸಲಾಗುತ್ತಿದೆ.

ಆದ್ದರಿಂದ, ಉನ್ನತ ಶಿಕ್ಷಣದಿಂದ ಅವಕಾಶವಂಚಿತ, ಕೃಷಿ ಹಾಗೂ ಪೂರಕ ಉದ್ದಿಮೆಗಳಲ್ಲಿ ನಿರತರಾದ ಯುವಕ–ಯುವತಿಯರು ಹಾಗೂ ಕೃಷಿಕರ ಮಕ್ಕಳು ಈ ಅಲ್ಪಾವಧಿಯ ಕೋರ್ಸುಗಳಿಗೆ ಪ್ರವೇಶ ಪಡೆದು ಸಂಬಂಧಿಸಿದ ಕ್ಷೇತ್ರಗಳಲ್ಲಿ ತರಬೇತಿ ಹಾಗೂ ಕೌಶಲ್ಯ ಪಡೆದು ಸರಕಾರಿ ಅಥವಾ ಖಾಸಗಿ ಸಂಸ್ಥೆಗಳ ನೌಕರಿಗಾಗಿ ಪರದಾಡದೇ ಸ್ವಾವಲಂಬಿ ಬದುಕನ್ನು ರೂಪಿಸಿಕೊಳ್ಳುವಲ್ಲಿ ಯಶಸ್ಸು ಪಡೆಯಲಿ ಎಂದು ಹಾರೈಸುವೆ.

ಡಾ. ಆರ್. ಆರ್. ಹಂಚಿನಾಳ
ಕುಲಪತಿಗಳು,
ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ಡಿಪ್ಲೋಮಾ ಮತ್ತು ಸರ್ಟಿಫಿಕೇಟ ಕೋರ್ಸುಗಳಿಗೆ ವಿವರಣಾ ಹಾಗೂ ಮಾಹಿತಿ ಪತ್ರಿಕೆ

೨೦೧೦

# ಕೃಷಿ ವಿಶ್ವವಿದ್ಯಾಲಯ, ಧಾರವಾಡ

## ಡಾ. ಆರ್. ಆರ್. ಹಂಚಿನಾಳ

**ಕುಲಪತಿಗಳು ಹಾಗೂ ಶಿಕ್ಷಣ ನಿರ್ದೇಶಕರು**

## ವಿದ್ಯಾಧಿಕಾರಿಗಳು (ಡೀನ್ಸ್)

| | |
|---|---|
| ೧.ಡಾ. ಬಿ.ಎಮ್. ಖಾದಿ, ಡೀನ್ (ಸ್ನಾತಕೋತ್ತರ) | ಫೋ: ೦೮೩೬-೨೭೪೮೪೭೨ |
| ೨.ಡಾ. ಎಮ್.ಬಿ. ಚೆಟ್ಟಿ, ಡೀನ್ (ಸ್ನಾತಕ) | ಫೋ: ೦೮೩೬-೨೭೯೨೧೮೦ |
| ೩.ಡಾ. ರಮಾ ನಾಯಕ್, ಡೀನ್ (ಗೃಹ ವಿಜ್ಞಾನ) | ಫೋ: ೦೮೩೬-೨೪೪೩೭೧೪ |
| ೪.ಡಾ. ಪಿ.ಡಬ್ಲು. ಬಾಸರಕರ, ಡೀನ್ (ವಿದ್ಯಾರ್ಥಿ ಕಲ್ಯಾಣ) | ಫೋ: ೦೮೩೬-೨೪೪೩೫೧೪ |

## ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ


**ಡಾ. ಎಚ್.ಎಸ್. ವಿಜಯಕುಮಾರ**
**ಕುಲಸಚಿವರು**
**ಎತ್ತಿನಗುಡ್ಡ ಆವರಣ, ಕೃಷಿನಗರ**
**ಕೃಷಿ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೫**
☎ : ೦೮೩೬-೨೭೪೭೯೫೮/೨೪೪೮೫೧೨, Extn. ೨೧೪
ಫ್ಯಾಕ್ಸ್: ೦೮೩೬-೨೭೪೫೨೭೬,
ಈ-ಮೇಲ್: rigistraruasd@rediffmail.com

**ಡಾ. ಬಿ.ಎಂ. ಖಾದಿ**
**ವಿದ್ಯಾಧಿಕಾರಿಗಳು (ಸ್ನಾತಕೋತ್ತರ)**
**ಎತ್ತಿನಗುಡ್ಡ ಆವರಣ, ಕೃಷಿನಗರ**
**ಕೃಷಿ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೫**
☎ : ೦೮೩೬-೨೪೪೦೯೪೭ / ೨೪೪೮೫೧೨ Extn. ೨೧೩, ೩೩೯
ಫ್ಯಾಕ್ಸ್: ೦೮೩೬-೨೪೪೦೯೪೭
ಈ-ಮೇಲ್: dipgs.uasd@gmail.com
dipgsdharwad@gmail.com

# ಕೃಷಿ ವಿಶ್ವವಿದ್ಯಾಲಯ, ಧಾರವಾಡ

## ಡಿಪ್ಲೋಮಾ ಮತ್ತು ಸರ್ಟಿಫಿಕೇಟ ಕೋರ್ಸುಗಳಿಗೆ ವಿವರಣಾ ಹಾಗೂ ಮಾಹಿತಿ ಪತ್ರಿಕೆ


| | | |
|---|---|---|
| ಪ್ರಕಟಣೆಯ ವರ್ಷ | : | **ಜುಲೈ, ೨೦೧೦** |
| ಪ್ರತಿಗಳ ಸಂಖ್ಯೆ | : | **೩೦೦** |
| ಪುಟಗಳು | : | ೭ + iv |
| ಮಾಹಿತಿ ಕ್ರೋಢೀಕರಣ | : | **ಡಾ. ಬಿ.ಎಂ. ಖಾದಿ**<br>ಡೀನ್ (ಸ್ನಾತಕೋತ್ತರ)<br>ಕೃವಿವಿ, ಧಾರವಾಡ |
| | : | **ಶ್ರೀ. ವೈ. ಆರ್. ಆಲದಕಟ್ಟಿ**<br>ತಾಂತ್ರಿಕ ಅಧಿಕಾರಿ (ಡಿಪ್ಲೋಮಾ ಕೋರ್ಸ್)<br>ಕೃವಿವಿ, ಧಾರವಾಡ |
| ಸಂಪಾದಕರು | : | **ಡಾ. ಡಿ.ಪಿ. ಬಿರಾದಾರ**<br>ಪ್ರಾಧ್ಯಾಪಕರು (ಬೇಸಾಯಶಾಸ್ತ್ರ)<br>ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ |
| ಪ್ರಕಾಶಕರು | : | **ಡಾ. ಎಚ್.ಎಸ್. ವಿಜಯಕುಮಾರ**<br>ಕುಲಸಚಿವರು<br>ಕೃವಿವಿ, ಧಾರವಾಡ |
| ಅಕ್ಷರ ವಿನ್ಯಾಸ & ಮುಖ ಪುಟ ವಿನ್ಯಾಸ | : | **ಡಿಟಿಪಿ ಘಟಕ**<br>ಪ್ರಕಟಣಾ ಕೇಂದ್ರ<br>ಕೃವಿವಿ, ಧಾರವಾಡ |

## ಶೈಕ್ಷಣಿಕ ಘಟಕ, ಕುಲಸಚಿವರ ಕಾರ್ಯಾಲಯ

| | |
|---|---|
| ಡಾ. ಎಚ್. ಎಸ್. ವಿಜಯಕುಮಾರ | ಕುಲಸಚಿವರು |
| ಶ್ರೀ ರಾಘವೇಂದ್ರ | ಆಪ್ತ ಕಾರ್ಯದರ್ಶಿ |
| ಡಾ. ಎಸ್. ಎಸ್. ಪಾಟೀಲ | ಹಿರಿಯ ಸಹಾಯಕ |
| ಶ್ರೀ ಎಸ್. ಎನ್. ಪಾಟೀಲ | ಹಿರಿಯ ಸಹಾಯಕ |
| ಶ್ರೀ ಎಮ್. ಜಿ. ಕಂಬಿ | ಹಿರಿಯ ಸಹಾಯಕ |
| ಶ್ರೀಮತಿ ಜೆ. ಎಮ್. ಬೊಂಗಾಳೆ | ಹಿರಿಯ ಸಹಾಯಕ |
| ಶ್ರೀ ಅರವಿಂದ ಹುಬ್ಬಳ್ಳಿ | ಬೆರಳಚ್ಚುಗಾರ |
| ಶ್ರೀ ಅಷ್ಫಾಕ್ ಕುಳ್ಳೂರ | ಬೆರಳಚ್ಚುಗಾರ |

## ಸ್ನಾತಕೋತ್ತರ ನಿರ್ದೇಶನಾಲಯ

| | |
|---|---|
| ಡಾ. ಬಿ.ಎಮ್. ಖಾದಿ | ಡೀನ್ (ಸ್ನಾತಕೋತ್ತರ) |
| ಶ್ರೀ ವೈ. ಆರ್. ಆಲದಕಟ್ಟಿ | ತಾಂತ್ರಿಕ ಅಧಿಕಾರಿ (ಡಿಪ್ಲೋಮಾ ಕೋರ್ಸ್) |
| ಶ್ರೀ ಎಮ್. ಆರ್. ಪಾಟೀಲ | ಸಹಾಯಕ ಕುಲಸಚಿವರು |
| ಶ್ರೀ ಎಚ್. ಎಸ್. ಪ್ರಸನ್ನಕುಮಾರ | ಆಪ್ತ ಕಾರ್ಯದರ್ಶಿ |
| ಶ್ರೀ ಆರ್. ಚಂದ್ರಪ್ಪ | ಸಹಾಯಕ |
| ಶ್ರೀಮತಿ ಭಾರತಿ ಪಾಗದ | ಗ್ರಾಜುಯೇಟ್ ಅಸಿಸ್ಟಂಟ್ |

# ಡಿಪ್ಲೋಮಾ ಮತ್ತು ಸರ್ಟಿಫಿಕೇಟ ಕೋರ್ಸುಗಳಿಗೆ ವಿವರಣಾ ಹಾಗೂ ಮಾಹಿತಿ ಪತ್ರಿಕೆ

ಕೃಷಿ ಅಭಿವೃದ್ಧಿ ಹಾಗೂ ರೈತ ಸಮುದಾಯಕ್ಕೆ ಕೃಷಿಯಲ್ಲಿನ ತಾಂತ್ರಿಕತೆಗಳನ್ನು ಮುಟ್ಟಿಸುವ ಉದ್ದೇಶಗಳೊಂದಿಗೆ ೧೯೪೭ ರಲ್ಲಿ ಮುಂಬೈ ಪ್ರಾಂತ ಸರಕಾರವು ಧಾರವಾಡ ಕೃಷಿ ಮಹಾವಿದ್ಯಾಲಯವನ್ನು ಸ್ಥಾಪಿಸಿತು. ಈ ಮಹಾವಿದ್ಯಾಲಯವು ಕೃಷಿ ಸಂಶೋಧನಾ ಕೇಂದ್ರ, ಹೆಬ್ಬಳ್ಳಿ ಫಾರ್ಮ ಇಲ್ಲಿ ಪ್ರಾರಂಭವಾಯಿತು. ಮೊದಲು ಮುಂಬೈ ವಿಶ್ವವಿದ್ಯಾಲಯಕ್ಕೊಳಪಟ್ಟಿದ್ದ ಈ ವಿಶ್ವವಿದ್ಯಾಲಯವು, ೧೯೫೦ ರಿಂದ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಹಸ್ತಾಂತರಗೊಂಡಿದ್ದು, ರಾಜ್ಯಗಳ ಪುನರ್‌ವಿಂಗಡಣೆ ನಂತರ ೧೯೫೬ ರಲ್ಲಿ ಮೈಸೂರು ಸರಕಾರದ ಕೃಷಿ ಇಲಾಖೆಯ ಆಡಳಿತಾತ್ಮಕ ವ್ಯಾಪ್ತಿಗೆ ಒಳಪಟ್ಟಿತು. ಈ ಮಹಾವಿದ್ಯಾಲಯವನ್ನೊಳಗೊಂಡು ೧೯೬೫ ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಮುಂದೆ ೧೯೮೬ ರಲ್ಲಿ ಉತ್ತರ ಕರ್ನಾಟಕದಲ್ಲಿ ರಾಜ್ಯದ ಎರಡನೆಯ ಕೃಷಿ ವಿಶ್ವವಿದ್ಯಾಲಯವು ಧಾರವಾಡದಲ್ಲಿ ಸ್ಥಾಪನೆಯಾಯಿತು. ಉತ್ತರ ಕರ್ನಾಟಕದ ೭-ಜಿಲ್ಲೆಗಳು ಧಾರವಾಡ ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿದ್ದು, ಒಟ್ಟು ೪-ಕೃಷಿ ಮಹಾವಿದ್ಯಾಲಯಗಳು, ೨೧-ಕೃಷಿ ಸಂಶೋಧನೆ ಕೇಂದ್ರಗಳು, ೫-ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ ೬-ವಿಸ್ತರಣಾ ಶಿಕ್ಷಣ ಘಟಕಗಳನ್ನು ಒಳಗೊಂಡಿದೆ. ಕೃಷಿ ವಿಶ್ವವಿದ್ಯಾಲಯವು ಸಂಶೋಧನೆ, ಶಿಕ್ಷಣ ಹಾಗೂ ವಿಸ್ತರಣೆ ಚಟುವಟಿಕೆಗಳನ್ನು ಕೃಷಿ ಹಾಗೂ ಕೃಷಿ ಪೂರಕ ಕ್ಷೇತ್ರಗಳಲ್ಲಿ ಹಮ್ಮಿಕೊಂಡಿದ್ದು, ಕೃಷಿ ಉತ್ಪಾದನೆ ಹೆಚ್ಚಿಸುವಲ್ಲಿ ಹಾಗೂ ರೈತ ಸಮುದಾಯದ ಅಭಿವೃದ್ಧಿಗೆ ಮಹತ್ತರ ಪಾತ್ರ ವಹಿಸುತ್ತಿದೆ.

ಸಧ್ಯ ಕೃಷಿ ಹಾಗೂ ಕೃಷಿ ಸಂಬಂಧಿತ ವಿಜ್ಞಾನಗಳಲ್ಲಿ ಉನ್ನತ ಶಿಕ್ಷಣವನ್ನು ಪೂರೈಸುತ್ತಿರುವ (ಸ್ನಾತಕ ಹಾಗೂ ಸ್ನಾತಕೋತ್ತರ) ಈ ವಿಶ್ವವಿದ್ಯಾಲಯವು ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ತನ್ನದೇ ಆದ ಮಹತ್ತರ ಕಾಣಿಕೆ ನೀಡುತ್ತಿದೆ. ಗ್ರಾಮೀಣ ಯುವಕರಿಗೆ, ಕೃಷಿಕರ ಹಾಗೂ ಕೃಷಿ ಕಾರ್ಮಿಕರ ಮಕ್ಕಳು ಸೌಲಭ್ಯಗಳ ಕೊರತೆ ಹಾಗೂ ಆರ್ಥಿಕತೆ ತೊಂದರೆಯಿಂದಾಗಿ ಉನ್ನತ ಶಿಕ್ಷಣ ಪಡೆಯುವುದು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಕೃಷಿಯಲ್ಲಿ ಹಾಗೂ ಕೃಷಿ ಪೂರಕ ಉದ್ದಿಮೆಗಳಲ್ಲಿ ಕಡಿಮೆ ಅವಧಿಯ ತರಬೇತಿ ಒದಗಿಸಿ, ಕೃಷಿ ಆಧಾರಿತ ಉದ್ದಿಮೆಗಳಲ್ಲಿ ಆತ್ಮವಿಶ್ವಾಸದಿಂದ ತೊಡಗಿಸಿಕೊಂಡು ಸ್ವಾವಲಂಬಿ ಬದುಕನ್ನು ರೂಪಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯವು ಈ ಕೆಳಗಿನ ಮುಖ್ಯ ಕೃಷಿ ಕ್ಷೇತ್ರಗಳಲ್ಲಿ ಡಿಪ್ಲೋಮಾ/ಸರ್ಟಿಫಿಕೇಟ ಕೋರ್ಸುಗಳನ್ನು ಪ್ರಾರಂಭಿಸಿದೆ.

**ಈ ಕೋರ್ಸುಗಳ ಬೋಧನೆಯು ಕನ್ನಡ ಭಾಷೆಯಲ್ಲಿರುವುದು**. ಈ ಎಲ್ಲ ಕೋರ್ಸುಗಳ ಬೋಧನೆ, ಪ್ರಾಯೋಗಿಕಗಳನ್ನು ಕೃಷಿ ವಿಶ್ವವಿದ್ಯಾಲಯದ ಧಾರವಾಡ ಆವರಣದಲ್ಲಿ ಒದಗಿಸಲಾಗುವುದು.

**ಅ. ಡಿಪ್ಲೋಮಾ ಕೋರ್ಸುಗಳು (೨ ಸೆಮಿಸ್ಟರಗಳ ಒಂದು ವರ್ಷ)**

೧. ಸಾವಯವ ಕೃಷಿ　೨. ಬೀಜೋತ್ಪಾದನೆ　೩. ಸಮಗ್ರ ಕೃಷಿ

೪. ಸಸ್ಯ ಸಂರಕ್ಷಣೆ　೫. ಫ್ಯಾಷನ್ ಮತ್ತು ಉಡುಪು ವಿನ್ಯಾಸ　೬. ಪುಷ್ಪಾಲಂಕಾರ ಹಾಗೂ ಗ್ರಾಹಕ ಉತ್ಪನ್ನಗಳು

**ಬ. ಸರ್ಟಿಫಿಕೇಟ ಕೋರ್ಸುಗಳು (೩-ತಿಂಗಳು)**

೧. ಹೈನುಗಾರಿಕೆ　೨. ಕೋಳಿ ಸಾಕಾಣಿಕೆ

ಆಯ್ಕೆ ಮಾಡಬೇಕಾದ ಅಭ್ಯರ್ಥಿಗಳ ಸಂಖ್ಯೆ : ಪ್ರತಿ ಕೋರ್ಸಿಗೆ ಕನಿಷ್ಟ ೫ ಹಾಗೂ ಗರಿಷ್ಟ ೨೦ ಅಭ್ಯರ್ಥಿಗಳು

ಈ ಮೇಲಿನ ಡಿಪ್ಲೋಮಾ/ಸರ್ಟಿಫಿಕೇಟ ಕೋರ್ಸುಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳಿಗೆ ಅವಶ್ಯಕ ಮಾಹಿತಿಯನ್ನು ಈ ವಿವರಣಾ ಪತ್ರಿಕೆಯು ಒಳಗೊಂಡಿದೆ.

## ಶೈಕ್ಷಣಿಕ ಮಾಹಿತಿ ಪತ್ರಿಕೆ

ಇದು ಈ ಕೋರ್ಸುಗಳಿಗೆ ಸಂಬಂಧಪಟ್ಟಂತೆ ನಿಯಮಾವಳಿಗಳು, ಕೋರ್ಸುಗಳ ಶೈಕ್ಷಣಿಕ ಮಾಹಿತಿ, ಪರೀಕ್ಷೆ ಮತ್ತು ಮೌಲ್ಯಮಾಪನ ಪದ್ದತಿ ಹಾಗೂ ಶಿಸ್ತು ನಿಯಮಗಳನ್ನು ಒಳಗೊಂಡಿದ್ದು, ನೋಂದಣಿಯ ಸಮಯದಲ್ಲಿ ಅಭ್ಯರ್ಥಿಗಳಿಗೆ ಈ ವಿವರದ ಪುಸ್ತಿಕೆಯನ್ನು ಒದಗಿಸಲಾಗುವುದು.

## ಪ್ರವೇಶಕ್ಕೆ ಶೈಕ್ಷಣಿಕ ಅರ್ಹತೆ ಹಾಗೂ ಆಯ್ಕೆ

ಈ ಕೋರ್ಸುಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಹಾಗೂ ರೋಷ್ಟರ್ ಪದ್ದತಿ ಆಧರಿಸಿ ಅಭ್ಯರ್ಥಿಗಳ ಆಯ್ಕೆ ಮಾಡಲಾಗುವುದು.

## ಸೀಟುಗಳ ಮೀಸಲಾತಿ

ಅಭ್ಯರ್ಥಿಗಳನ್ನು ಡಿಪ್ಲೋಮಾ ಕೋರ್ಸುಗಳಿಗೆ ಆಯ್ಕೆ ಮಾಡುವಾಗ ಈ ಕೆಳಗಿನಂತೆ ಮೀಸಲಾತಿ ಅನುಸರಿಸಲಾಗುವುದು.

೧. ಕೃಷಿಕರು/ಕೃಷಿಕರ ಮಕ್ಕಳಿಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ೧೯೬೩ರ ಆ್ಯಕ್ಟ್ ಪ್ರಕಾರ ಮೀಸಲಾತಿ (ಶೇ.೨೩.೮) ಅನುಸರಿಸಲಾಗುವುದು.

ಸ್ವಂತ ಜಮೀನು ಹೊಂದಿದ್ದು, ಸ್ವತಃ ಉಳುಮೆಯಲ್ಲಿ ತೊಡಗಿಸಿಕೊಂಡು ಕೃಷಿಯಿಂದಲೇ ಆದಾಯ ಪಡೆಯುತ್ತಿರುವ ಹಾಗೂ ಕೃಷಿ ಕ್ಷೇತ್ರಗಳಲ್ಲಿ ಕೃಷಿ ಕಾರ್ಯಗಳಿಂದಲೇ ಆದಾಯ ಪಡೆಯುವ ಕೃಷಿಕರ/ಕೃಷಿಕಾರ್ಮಿಕರ ಮಕ್ಕಳಿಗೆ ಈ ಮೀಸಲಾತಿ ಅನ್ವಯಿಸುವುದು.

೨. ಉಳಿದ (ಶೇ. ೭೬.೨) ಸೀಟುಗಳಿಗೆ ಚಾಲ್ತಿಯಲ್ಲಿನ ಕರ್ನಾಟಕ ಸರಕಾರದ ಆದೇಶದಂತೆ ವರ್ಟಿಕಲ್ ಮೀಸಲಾತಿ ಅನುಸರಿಸಲಾಗುವುದು. ಸರಕಾರದ ಅದೇಶ ನಂ. ಎಸ್‌ಡಬ್ಲೂಎಲ್/೨೫೧/ಬಿಸಿಎ/೮೪ ದಿ. ೩೧-೧-೧೯೮೫ ರ ಪ್ರಕಾರ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದ ಆದೇಶಗಳಂತೆ ಎಸ್.ಸಿ, ಎಸ್.ಟಿ, ಪ್ರವರ್ಗ-೧, ೨ಎ, ೨ಬಿ, ೩ಎ ಮತ್ತು ೩ಬಿ ವರ್ಗಗಳಿಗೆ ಮೀಸಲಾತಿ ಅನುಸರಿಸಲಾಗುವುದು.

**ಟಿಪ್ಪಣಿ–೧ :** ಸರಕಾರಿ ಆದೇಶ ನಂ. ಎಸ್‌ಡಬ್ಲ್ಯೂಎಲ್/೨೨೫/ಬಿಸಿಎ/೨೦೦೦ ದಿ. ೩೦–೩–೨೦೦೨ ರಂತೆ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಈ ಕೆಳಗಿನ ಅಭ್ಯರ್ಥಿಗಳು ೨ಎ, ೨ಬಿ, ೩ಎ ಮತ್ತು ೩ಬಿ ವರ್ಗಗಳಲ್ಲಿ ಮೀಸಲಾತಿಗೆ ಅರ್ಹರಾಗಿರುವುದಿಲ್ಲ.

೧. ಮೇಲಿನ ಸರಕಾರಿ ಆದೇಶದ ಐಟಂ–೧ ರಡಿಯಲ್ಲಿ ನಮೂದಿಸಿದ ವ್ಯಕ್ತಿಗಳ ಮಗ/ಮಗಳು.

೨. ಸರಕಾರಿ ಅಥವಾ ಅರೆ ಸರಕಾರಿ ಸಂಸ್ಥೆಗಳಲ್ಲಿ ಎ–ಶ್ರೇಣಿ, ಬಿ–ಶ್ರೇಣಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಯ ಮಗ/ಮಗಳು ಅಥವಾ ಖಾಸಗಿ ಸಂಸ್ಥೆಯಲ್ಲಿ ಬಿ–ಶ್ರೇಣಿ ಹುದ್ದೆ ಅಧಿಕಾರಿಯ ವೇತನಕ್ಕೆ ಸಮನಾಗಿ (ರೂ. ೬೦೦೦–೧೧,೨೦೦ ವೇತನ ಶ್ರೇಣಿ) ವೇತನ ಹೊಂದಿರುವ ವ್ಯಕ್ತಿಯ ಮಗ/ಮಗಳು.

೩. ಅಭ್ಯರ್ಥಿಯ ಹಾಗೂ ತಂದೆ–ತಾಯಿ/ಪೋಷಕರ ವಾರ್ಷಿಕ ಆದಾಯವು ರೂ. ೨ ಲಕ್ಷ ಕ್ಕಿಂತಲೂ ಮೀರಿದ್ದರೆ.

೪. ಅಭ್ಯರ್ಥಿಯು ಹಾಗೂ ತಂದೆ/ತಾಯಿ/ಪೋಷಕರು ಕರ್ನಾಟಕ ಜಮೀನು ಪರಿಷ್ಕಣೆ ಕಾಯಿದೆ ೧೯೬೧ ರಲ್ಲಿ ನಿಗದಿ ಪಡಿಸಿದಂತೆ ೧೦ ಯೂನಿಟ್ ಕೃಷಿ ಜಮೀನು ಹೊಂದಿದ್ದರೆ ಹಾಗೂ ೨೦ ಎಕರೆ ಗಿಂತಲೂ ಹೆಚ್ಚಿನ ಪ್ಲಾಂಟೇಶನ್ ಜಮೀನು ಹೊಂದಿದ್ದರೆ.

**ಟಿಪ್ಪಣಿ–೨:** ಎಸ್.ಸಿ/ಎಸ್.ಟಿ ಹಾಗೂ ಇತರೆ ಹಿಂದುಳಿದ ವರ್ಗಗಳಲ್ಲಿ (ಪ್ರ.ವರ್ಗ–೧, ೨ಎ, ೨ಬಿ, ೩ಎ ಮತ್ತು ೩ಬಿ) ಮೀಸಲಾತಿ ಬಯಸುವ ಅಭ್ಯರ್ಥಿಯು ಸಂಬಂಧಪಟ್ಟ ಪ್ರಾಧಿಕಾರದಿಂದ ಸೂಕ್ತ ಪ್ರಮಾಣ ಪತ್ರ ಸಲ್ಲಿಸಬೇಕು.

**ಟಿಪ್ಪಣಿ–೩:** ವರ್ಟಿಕಲ್ ಮಿಸಲಾತಿಯನ್ವಯ ಆಯಾ ವರ್ಗಗಳಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದಾಗಿ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ ಇಂತಹ ಮಿಸಲಾತಿ ಸೀಟುಗಳನ್ನು **"ಸಾಮಾನ್ಯ ವರ್ಗ"** ದ ಸೀಟುಗಳೆಂದು ಪರಿಗಣಿಸಿ, ಸಾಮಾನ್ಯ ವರ್ಗದಲ್ಲಿನ ಅಭ್ಯರ್ಥಿಗಳಿಗೆ ಮೆರಿಟ್ ಆಧಾರದಲ್ಲಿ ಪ್ರವೇಶ ನೀಡಲಾಗುವುದು.

## ಪ್ರವೇಶಕ್ಕೆ ಅರ್ಜಿ

ಈ ಕೋರ್ಸುಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು **ಕುಲಸಚಿವರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ** ಇವರ ಕಛೇರಿಯಿಂದ ಖುದ್ದಾಗಿ ಅಥವಾ ವಿಶ್ವವಿದ್ಯಾಲಯದ ವೆಬ್‌ಸೈಟ್ www.uasd.edu ದಿಂದಲೂ ಪಡೆಯಬಹುದು. ಸಂಪೂರ್ಣವಾಗಿ ಭರ್ತಿಮಾಡಿದ ಅರ್ಜಿಯನ್ನು **ಕುಲಸಚಿವರು, ಕೃಷಿನಗರ, ಕೃಷಿ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೫** ಇವರಿಗೆ ನಿಗದಿತ ದಿನಾಂಕ ದೊಳಗೆ ಸಲ್ಲಿಸಬೇಕು.

## ಪ್ರವೇಶ ವಿಧಾನ

ವಿವಿಧ ಡಿಪ್ಲೋಮಾ/ಸರ್ಟಿಫಿಕೇಟ ಕೋರ್ಸುಗಳಿಗೆ ಪ್ರವೇಶವನ್ನು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೇರೆಗೆ ಸರಕಾರದ ಮೀಸಲಾತಿ ಆದೇಶದಂತೆ ಹಾಗೂ ಮೆರಿಟ್ ಆಧರಿಸಿ ಅಭ್ಯರ್ಥಿಗಳಿಗೆ ಪ್ರವೇಶ ನೀಡಲಾಗುವುದು. **ಕೃಷಿಕರ/ಕೃಷಿಕಾರ್ಮಿಕರ ಮಕ್ಕಳಿಗೆ ಹಾಗೂ ಕೃಷಿಯಲ್ಲಿ ಹಾಗೂ ಕೃಷಿ ಪೂರಕ ಉದ್ದಿಮೆಗಳಲ್ಲಿ ತೊಡಗಿಸಿಕೊಂಡು ಆತ್ಮವಿಶ್ವಾಸದಿಂದ ಸ್ವಾವಲಂಬಿ ಬದುಕನ್ನು ರೂಪಿಸಿಕೊಳ್ಳುವ ಉದ್ದೇಶದ ಗ್ರಾಮೀಣ ಯುವಕರಿಗೆ ಆದ್ಯತೆ ನೀಡಲಾಗುವುದು.**

ನಿಗದಿತ ದಿನಾಂಕದಂದು ಧಾರವಾಡ, ಕೃಷಿ ವಿಶ್ವವಿದ್ಯಾಲಯದಲ್ಲಿ ಅರ್ಹಅಭ್ಯರ್ಥಿಗಳ ಪ್ರವೇಶಕ್ಕೆ ನಿಗದಿಪಡಿಸಿದ ಎಲ್ಲ ಮೂಲ ದಾಖಲಾತಿ ಹಾಗೂ ಅಭ್ಯರ್ಥಿಯ ನಡವಳಿಕೆ, ದೈಹಿಕ ಸಾಮರ್ಥ್ಯತೆಯನ್ನು ಪರಿಶೀಲಿಸಲಾಗುವುದು. ಆದ್ದರಿಂದ ಅಭ್ಯರ್ಥಿಗಳು ಖುದ್ದಾಗಿ ತಮ್ಮ ಸ್ವಂತ ಖರ್ಚಿನಲ್ಲಿ ತಪ್ಪದೇ ಎಲ್ಲ ಮೂಲ ದಾಖಲೆಗಳೊಂದಿಗೆ ಪರಿಶೀಲನೆಗೆ (ಕೌನ್ಸಲಿಂಗ್) ಹಾಜರಾಗಬೇಕು.

**ಕೌನ್ಸಲಿಂಗ್ (ಪರಿಶೀಲನಾ) ದಿನಾಂಕ: 18–8–2010 (ಕೌನ್ಸಲಿಂಗ್ ದಿನಾಂಕದ ಕುರಿತು ಪ್ರತ್ಯೇಕ ಸೂಚನೆಯನ್ನು ಕಳುಹಿಸುವುದಿಲ್ಲ).**

**ಮೊದಲನೇ ಸೆಮಿಸ್ಟರ್ ಪ್ರಾರಂಭವಾಗುವ ದಿನಾಂಕ : 23–8–2010**

## ಡಿಪ್ಲೋಮಾ/ಸರ್ಟಿಫಿಕೇಟ ಕೋರ್ಸುಗಳ ಶುಲ್ಕದ ವಿವರ

ಆಯ್ಕೆಯಾದ ಅಭ್ಯರ್ಥಿಗಳು ಈ ಕೆಳಗಿನಂತೆ ಸಂಬಂಧಪಟ್ಟ ಡಿಪ್ಲೋಮಾ ಕೋರ್ಸಿಗೆ ನಿಗದಿಪಡಿಸಿದ ಶುಲ್ಕವನ್ನು ಪ್ರವೇಶದ ದಿನದಂದು ಪಾವತಿ ಮಾಡಬೇಕು.

೧. **ಡಿಪ್ಲೋಮಾ ಕೋರ್ಸಗೆ ಆಯ್ಕೆಯಾದ ಅಭ್ಯರ್ಥಿಯು ಸಂದಾಯ ಮಾಡಬೇಕಾದ ಶುಲ್ಕದ ವಿವರ ಈ ಕೆಳಗಿನಂತಿದೆ.**

| ಕ್ರ. ಸಂ. | ವಿವರ | ಶುಲ್ಕ (ರೂ.) | | | | | |
|---|---|---|---|---|---|---|---|
| | | ೧ ನೇ ಸೆಮಿಸ್ಟರ್ | | | ೨ ನೇ ಸೆಮಿಸ್ಟರ್ | | |
| | | ಸಾಮಾನ್ಯ ವರ್ಗ | ಎಸ್‌ಸಿ/ ಎಸ್‌ಟಿ/ ವರ್ಗ–೧ | ಇತರೆ ವರ್ಗಗಳು (೨ಎ, ೨ಬಿ, ೩ಎ, ೩ಬಿ) | ಸಾಮಾನ್ಯ ವರ್ಗ | ಎಸ್‌ಸಿ/ ಎಸ್‌ಟಿ ವರ್ಗ–೧ | ಇತರೆ ವರ್ಗಗಳು (೨ಎ, ೨ಬಿ, ೩ಎ, ೩ಬಿ) |
| ೧ | ನೋಂದಣಿ | ೩೦೦ | ೩೦೦ | ೩೦೦ | ೩೦೦ | ೩೦೦ | ೩೦೦ |
| ೨ | ಬೋಧನಾ ಶುಲ್ಕ | ೨೬೦೦ | – | ೧೩೦೦ | ೨೬೦೦ | – | ೧೩೦೦ |
| ೩ | ಪ್ರಯೋಗಾಲಯ ಶುಲ್ಕ | ೮೦೦ | – | ೮೦೦ | ೮೦೦ | – | ೮೦೦ |
| ೪. | ಗ್ರಂಥಾಲಯ ಶುಲ್ಕ | ೩೦೦ | ೩೦೦ | ೩೦೦ | ೩೦೦ | ೩೦೦ | ೩೦೦ |
| ೫. | ಪರೀಕ್ಷಾ ಶುಲ್ಕ | ೩೫೦ | – | ೩೫೦ | ೩೫೦ | – | ೩೫೦ |
| ೬. | ಪ್ರವಾಸ ಶುಲ್ಕ | ೪೦೦ | ೪೦೦ | ೪೦೦ | ೪೦೦ | ೪೦೦ | ೪೦೦ |
| ೭. | ವೈದ್ಯಕೀಯ ಶುಲ್ಕ | ೧೫೦ | ೧೫೦ | ೧೫೦ | ೧೫೦ | ೧೫೦ | ೧೫೦ |
| ೮. | ಮ್ಯಾಗ್‌ಝಿನ್ ಶುಲ್ಕ | ೧೦೦ | ೧೦೦ | ೧೦೦ | ೧೦೦ | ೧೦೦ | ೧೦೦ |
| | **ಒಟ್ಟು (ರೂ)** | **೫೦೦೦** | **೧೨೫೦** | **೩೭೦೦** | **೫೦೦೦** | **೧೨೫೦** | **೩೭೦೦** |

**೨. ಸರ್ಟಿಫಿಕೇಟ ಕೋರ್ಸಗೆ ಆಯ್ಕೆಯಾದ ಅಭ್ಯರ್ಥಿಯು ಸಂದಾಯ ಮಾಡಬೇಕಾದ ಶುಲ್ಕದ ವಿವರ ಈ ಕೆಳಗಿನಂತಿದೆ.**

ಸರ್ಟಿಫಿಕೇಟ ಕೋರ್ಸಗೆ ಆಯ್ಕೆಯಾದ ಎಲ್ಲಾ ವರ್ಗದ ಅಭ್ಯರ್ಥಿಗಳು **ರೂ.೩,೦೦೦=೦೦** ಶುಲ್ಕ ಸಂದಾಯ ಮಾಡಬೇಕು.

**ಟಿಪ್ಪಣಿ:**

೧. ಡಿಪ್ಲೋಮಾ ಕೋರ್ಸಗೆ ಎಸ್.ಸಿ. / ಎಸ್.ಟಿ. / ವರ್ಗ-೧ ರಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಸರಕಾರಿ ಆದೇಶದನ್ವಯ ಸೂಕ್ತ ದಾಖಲೆಗಳ ಪರಿಶೀಲನೆ ನಂತರ ಶುಲ್ಕ ರಿಯಾಯಿತಿ ನೀಡಲಾಗುವುದು.

೨. ಈ ಕೋರ್ಸುಗಳಿಗೆ ನೊಂದಾಯಿಸಿದ ನಂತರ ಯಾವದೇ ಕಾರಣಕ್ಕೂ ಸಂದಾಯ ಮಾಡಿದ ಶುಲ್ಕವನ್ನು ವಾಪಸಕೊಡುವುದಿಲ್ಲ.

೩. ಈ ಕೋರ್ಸುಗಳಿಗೆ ಆಯ್ಕೆಯಾದ ಅಭ್ಯರ್ಥಿಗಳು ಪ್ರವೇಶದ ದಿನದಂದು ತಪ್ಪದೇ ನಿಗದಿಪಡಿಸಿದ ಎಲ್ಲ ಶುಲ್ಕವನ್ನು ಪಾವತಿಮಾಡಬೇಕು.

## ನೋಂದಣಿ

ಆಯ್ಕೆಯಾದ ಕೋರ್ಸಿಗೆ ನೋಂದಣಿಯಾದ ನಂತರವೇ ಪ್ರವೇಶ ಪ್ರಕ್ರಿಯೆಯು ಪೂರ್ಣವಾಗುವುದು. ಆದ್ದರಿಂದ ವಿವಿಧ ಕೋರ್ಸಗಳಿಗೆ ಪ್ರವೇಶ ಪಡೆದ ಅಭ್ಯರ್ಥಿಗಳು ಖುದ್ದಾಗಿ ಹಾಜರಾಗಿ ಸಂಬಂಧಪಟ್ಟ ಕೋರ್ಸಿಗೆ ನೋಂದಣಿ ಮಾಡಿಸಬೇಕು. ಮೊದಲನೆಯ ಸೆಮಿಸ್ಟರ್‌ದಲ್ಲಿ ನಿಗದಿತ ದಿನಾಂಕದೊಳಗೆ ಆಯ್ಕೆಯಾದ ಕೋರ್ಸಿಗೆ ನೋಂದಣಿ ಮಾಡದಿದ್ದಲ್ಲಿ ಅಂತಹ ಅಭ್ಯರ್ಥಿಯ ಆಯ್ಕೆ ರದ್ದಾಗುವುದು.

ವಿಶ್ವವಿದ್ಯಾಲಯದಿಂದ ಪ್ರವೇಶ ಪತ್ರ ಪಡೆದ ಅಭ್ಯರ್ಥಿಯು ನಿಗದಿಪಡಿಸಿದ ದಿನಾಂಕದೊಳಗಾಗಿ ಎಲ್ಲ ಶುಲ್ಕವನ್ನು ಪಾವತಿಮಾಡಿ ಸೆಮಿಸ್ಟರ್ ಪ್ರಾರಂಭದ ಮೊದಲನೆಯ ದಿನದಂದು ನೋಂದಣಿಗಾಗಿ, ಧಾರವಾಡ ಕೃಷಿ ಮಹಾವಿದ್ಯಾಲಯದಲ್ಲಿ ಹಾಜರಿರಬೇಕು.

ಹೊಸದಾಗಿ ಪ್ರವೇಶ ಪಡೆದ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸಂಬಂದಿಸಿದ ಡೀನ್‌ರು ಓರಿಯಂಟೇಶನ್ ಕಾರ್ಯಕ್ರಮ ಹಮ್ಮಿಕೊಂಡು ಕೋರ್ಸುಗಳ ಬಗ್ಗೆ ವಿವರ ಮಾಹಿತಿ ನೀಡುವರು. ಕಾಯ್ದಿಟ್ಟ ಅಭ್ಯರ್ಥಿಗಳ ನೋಂದಣಿ ಅವಧಿಯು ಸೆಮಿಸ್ಟರ್ ಪ್ರಾರಂಭವಾದ ನಾಲ್ಕುವಾರಗಳ ನಂತರ ಕೊನೆಗೊಳ್ಳುವುದು. ಹೊಸದಾಗಿ ಪ್ರವೇಶಪಡೆದ ಅಭ್ಯರ್ಥಿಯ ಹಾಜರಾತಿಯನ್ನು ಆತನು/ಅವುಳು ನೋಂದಣಿ ಮಾಡಿಸಿದ ದಿನಾಂಕದಿಂದ ಪರಿಗಣಿಸಲಾಗುವುದು.

ಪ್ರವೇಶ ಪಡೆದ ಅಭ್ಯರ್ಥಿಯು ಮೊದಲನೆ ಸೆಮಿಸ್ಟರ್‌ದಲ್ಲಿ ಅಭ್ಯಸಿಸುವುದು ಕಡ್ಡಾಯ, ಯಾವುದೇ ಕಾರಣಕ್ಕೂ ಮೊದಲ ಸೆಮಿಸ್ಟರ್‌ದಲ್ಲಿ ಗೈರಾದಲ್ಲಿ ಅವರ ಪ್ರವೇಶವು ರದ್ದಾಗುವುದು. ಮೊದಲ ಸೆಮಿಸ್ಟರ್‌ದಲ್ಲಿ ಅಭ್ಯರ್ಥಿಯು ಕನಿಷ್ಟ ಒಂದು ವಿಷಯದಲ್ಲಿ **SA** (ಕಡಿಮೆ ಹಾಜರಾತಿ) **US** (ಅಸಮಾಧಾನಕರ) ಅಥವಾ **F** (ಫೇಲ್) ಈ ಶ್ರೇಣಿಗಳನ್ನು ಹೊರತುಪಡಿಸಿ ಉಳಿದ ಶ್ರೇಣಿಯನ್ನು ಪಡೆದು ಪಾಸಾಗಬೇಕು, ಇಲ್ಲದಿದ್ದಲ್ಲಿ ಅಂತಹವರ ಪ್ರವೇಶವು ರದ್ದಾಗುವುದು.

## ವಸತಿ ನಿಲಯ ಸೌಲಭ್ಯ

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಲಭ್ಯತೆಯ ಮೇರೆಗೆ ಅಭ್ಯರ್ಥಿಗಳಿಗೆ ವಸತಿ ನಿಲಯ ಸೌಲಭ್ಯ ಒದಗಿಸಲಾಗುವುದು. ಈ ಕೋರ್ಸುಗಳಿಗೆ ಪ್ರವೇಶ ಪಡೆದ ಅಭ್ಯರ್ಥಿಗಳು ವಸತಿ ನಿಲಯ ಸೌಲಭ್ಯಕ್ಕಾಗಿ ನಿಗದಿತ ಅರ್ಜಿಯನ್ನು ವಸತಿನಿಲಯದ ಪಾಲಕರಿಂದ (Warden) ಪಡೆದು, ಶೈಕ್ಷಣಿಕ ವರ್ಷ ಪ್ರಾರಂಭವಾಗುವುದಕ್ಕಿಂತ ಪೂರ್ವದಲ್ಲಿ ಸಲ್ಲಿಸಬೇಕು. ನಿಗದಿತ ಅರ್ಜಿ ನಮೂನೆಯನ್ನು ರೂ. ೫೦/– ನಗದಾಗಿ ಪಾವತಿಸಿ 'ವಸತಿ ಪಾಲಕರ' ಕಛೇರಿಯಿಂದ ಪಡೆಯಬಹುದಾಗಿದೆ. ವಸತಿ ನಿಲಯ ಪ್ರವೇಶಕ್ಕೆ ಈ ಕೆಳಗಿನಂತೆ ಶುಲ್ಕವನ್ನು ಭರಿಸಬೇಕು.

| | |
|---|---|
| ೧. ಪ್ರವೇಶ ಶುಲ್ಕ | ರೂ. ೫೦=೦೦ |
| ೨. ರೀಡಿಂಗ್ ರೂಂ ಹಾಗೂ ಸ್ಪೋರ್ಟ್ಸ್ ಶುಲ್ಕ | ರೂ. ೫೦=೦೦ |
| ೩. ಪಾತ್ರೆಗಳ ನಿರ್ವಹಣೆ /ಸಂರಕ್ಷಣೆ ಶುಲ್ಕ | ರೂ. ೫೦=೦೦ |
| ೪. ಮೆಸ್ ಡಿಪಾಸಿಟ್ | ರೂ. ೫೦೦೦=೦೦ |

**ಟಿಪ್ಪಣಿ:** ಎಸ್.ಸಿ./ಎಸ್.ಟಿ./ವರ್ಗ–೧ ರ ಅಭ್ಯರ್ಥಿಗಳಿಗೆ ಮೆಸ್ ಡಿಪಾಸಿಟ್ ರೂ. ೪೦೦೦=೦೦

ಮೆಸ್ ಡಿಪಾಸಿಟ್‌ನ್ನು ವಸತಿ ನಿಲಯ ಬಿಡುವಾಗ ಯಾವುದೇ ರೀತಿಯಲ್ಲಿ ಉಳಿದಿರುವ ಬಾಕಿಯನ್ನು ಸಂದಾಯ ಮಾಡಿಕೊಂಡು, ಉಳಿದದ್ದನ್ನು ವಾಪಸ್ ಕೊಡಲಾಗುವುದು. ಮೇಲಿನ ಶುಲ್ಕಗಳಲ್ಲದೇ, ಅಭ್ಯರ್ಥಿಯು ಪ್ರತಿ ತಿಂಗಳು ಭಾಡಿಗೆಯಾಗಿ ರೂ. ೪೦/– ನಿರ್ವಹಣೆಗಾಗಿ ರೂ. ೬೦/– ಹಾಗೂ ಸಿಬ್ಬಂದಿ ಖರ್ಚಾಗಿ ರೂ. ೭೦/– ಒಳಗೊಂಡು ಊಟದ ಖರ್ಚು, ವಿದ್ಯುತ್ ಖರ್ಚನ್ನು ವಸತಿ ನಿಲಯದ ನಿಯಮಗಳಂತೆ ಪಾವತಿಸಬೇಕಾಗುವುದು.

## ಕ್ಯಾಫಿಟೇರಿಯಾ

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಕ್ಯಾಫಿಟೇರಿಯಾ (ಚಹದ ಅಂಗಡಿ)ಗಳು ಲಭ್ಯವಿವೆ.

## ವೈದ್ಯಕೀಯ ಸೌಲಭ್ಯ

ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಸಾಮಾನ್ಯವಾದ ರೋಗ-ರುಜಿನಗಳ ಚಿಕಿತ್ಸೆಗಾಗಿ ಸೂಕ್ತ ವೈದ್ಯಕೀಯ ಸೌಲಭ್ಯವಿರುವುದು.

## ಸಾಮಾನ್ಯ ಮಾಹಿತಿ

ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ನಿಯಮಾವಳಿಗಳಿಗೆ ಬದ್ಧವಾಗಿರಬೇಕು. ವಿದ್ಯಾರ್ಥಿಗಳ ಶಿಸ್ತು ಬದ್ಧ ನಡವಳಿಕೆಗಳ ವಿವರವನ್ನು ವಿಶ್ವವಿದ್ಯಾಲಯದ ಶೈಕ್ಷಣಿಕ ಮಾಹಿತಿ ಹಾಗೂ ನಿಯಮಾವಳಿಗಳ ಕೈಪಿಡಿಯಲ್ಲಿ ವಿವರಿಸಲಾಗಿದೆ. ಪ್ರವೇಶಪಡೆದ ಎಲ್ಲ ಅಭ್ಯರ್ಥಿಗಳು ತಾವು ಕೃಷಿ ವಿಶ್ವವಿದ್ಯಾಲಯದ ನಿಯಮಾವಳಿಗಳಿಗೆ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾಗುವ ನಿಯಮಾವಳಿಗೆ ಬದ್ಧವಾಗಿದ್ದು, ಅದರಂತೆ ನಡೆದುಕೊಳ್ಳುವ ಬಗ್ಗೆ ಬರವಣಿಗೆಯಲ್ಲಿ ಮುಚ್ಚಳಿಕೆ ಪತ್ರ ಕೊಡುವುದು ಕಡ್ಡಾಯವಾಗಿರುವುದು.

ಈ ವಿವರಣಾ ಪತ್ರಿಕೆ (prospectus) ಯಲ್ಲಿ ನಮೂದಿಸಿದ/ನಿಗದಿಪಡಿಸಿದ ಯಾವುದೇ ಅಥವಾ ಎಲ್ಲ ನಿಬಂಧನೆಗಳನ್ನು ಬದಲಾವಣೆ ಮಾಡುವ ಹಕ್ಕನ್ನು ವಿಶ್ವವಿದ್ಯಾಲಯ ಹೊಂದಿದೆ.

**ಅಭ್ಯರ್ಥಿಗಳು ಈ ಕೆಳಗಿನ ಅಂಶಗಳನ್ನು ಗಮನಿಸುವುದು**

- ಪ್ರವೇಶದ ವಿವರಣಾ ಪತ್ರಿಕೆ (prospectus) ಯಲ್ಲಿ ನಿಗದಿಪಡಿಸಿದಂತೆ ಪ್ರವೇಶದ ಅರ್ಜಿಯು ಎಲ್ಲ ವಿವರಗಳನ್ನು ಹೊಂದಿರಬೇಕು ಹಾಗೂ ಸೂಕ್ತ ದಾಖಲೆಗಳ ಪ್ರತಿಗಳನ್ನು ಲಗತ್ತಿಸಬೇಕು. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

- ಅಭ್ಯರ್ಥಿಗಳು ಪರಿಶೀಲನಾ (ಕೌನ್ಸಲಿಂಗ್) ದಿನದಂದು ಎಲ್ಲ ಮೂಲ ದಾಖಲೆಗಳನ್ನು ಪರಿಶೀಲನೆಗೆ ಒದಗಿಸಬೇಕು.

- ಈ ಕೋರ್ಸುಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಅನಿವಾರ್ಯ ಕಾರಣಗಳಿಂದ ಯಾವುದೇ ಬದಲಾವಣೆಯಾದಲ್ಲಿ ಅದನ್ನು ಪ್ರಮುಖ ದಿನಪತ್ರಿಕೆಗಳ ಮೂಲಕ ಪ್ರಕಟಿಸಲಾಗುವುದು. ಈ ವಿಷಯಕ್ಕೆ ಪ್ರತಿ ಅಭ್ಯರ್ಥಿಗೆ ಮಾಹಿತಿಯನ್ನು ತಿಳಿಸಲಾಗುವುದಿಲ್ಲ.

- ಈ ಪ್ರವೇಶವು ಕೃಷಿ ವಿಶ್ವವಿದ್ಯಾಲಯದ ಕಾಯ್ದೆ-ಕಾನೂನುಗಳಿಗೆ ಹಾಗೂ ಸರಕಾರಿ ಆದೇಶಗಳಿಗೆ ಅನ್ವಯ ಅಭ್ಯರ್ಥಿಯ ಅರ್ಹತೆಯನ್ನು ಅವಲಂಬಿಸಿದೆ.

- ಪರಿಶೀಲನಾ (ಕೌನ್ಸಲಿಂಗ್) ನಂತರ ಅಭ್ಯರ್ಥಿಯು ಪ್ರವೇಶಕ್ಕೆ ಆಯ್ಕೆಯಾದಲ್ಲಿ ಅಂದೇ ನಿಗದಿತ ಶುಲ್ಕವನ್ನು ಸಂದಾಯಮಾಡಿ ಆಯ್ಕೆ ಪತ್ರ ಪಡೆಯಬೇಕು.